# ಕನ್ನಡದ ಅಭಿವೃದ್ಧಿ

ಕನ್ನಡ ಅಭಿವೃದ್ಧಿ ಎಂದರೆ ಕಟ್ಟಡ ಕಾಮಗಾರಿಗಳು ಎಂದರ್ಥವೆ? ಈ ವರ್ಷದ ರಾಜ್ಯ ಬಜೆಟ್‌ನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಚಟುವಟಿಕೆಗಳಿಗೆ ಒದಗಿಸಿರುವ ಹಣಕಾಸಿನ ವಿವರಗಳನ್ನು ಗಮನಿಸಿದಲ್ಲಿ ಈ ಅನುಮಾನ ಕಾಡದಿರದು. ಇದು ಈ ವರ್ಷದ್ದಷ್ಟೇ ಕಥೆ ಅಲ್ಲ. ಕಳೆದ ವರ್ಷದ ಬಜೆಟ್‌ನಲ್ಲೂ ಕನ್ನಡಕ್ಕೆ ದಕ್ಕಿದ್ದು ಇದೇ ಸ್ಥಿತಿ. ಪ್ರವಾಸಿಗರನ್ನು ಆಕರ್ಷಿಸುವ ಸಲುವಾಗಿ 'ಭುವನೇಶ್ವರಿ ದೇವಿ' ಪ್ರತಿಮೆ ಸ್ಥಾಪನೆಗೆ ರೂ.25ಕೋಟಿಗಳನ್ನು ಒದಗಿಸಿತ್ತು 2011ರ ಸಾಲಿನ ಬಜೆಟ್. ಈ ವರ್ಷದ ಬಜೆಟ್‌ನಲ್ಲೂ ಕನ್ನಡ ಮತ್ತು ಸಂಸ್ಕೃತಿ ಉದ್ಧಾರಕ್ಕಾಗಿ ಇಂತಹದೇ ಕಾಮಗಾರಿಗಳಿಗಾಗಿ ಹಣ ಒದಗಿಸಲಾಗಿದೆ. ಮೈಸೂರು ಅರಮನೆಗೆ 100 ವರ್ಷ ಆಗಿರುವ ಹಿನ್ನೆಲೆಯಲ್ಲಿ ಅಲ್ಲಿಯ ವಾಸ್ತುಶಿಲ್ಪ ನವೀಕರಿಸಲು ಹಾಗೂ ಉದ್ಯಾನಗಳನ್ನು ಉನ್ನತದರ್ಜೆಗೆ ಏರಿಸಲು 25 ಕೋಟಿ ರೂಪಾಯಿ ಮೀಸಲಿರಿಸಲಾಗಿದೆ. ಕುಪ್ಪಳಿಯಲ್ಲಿ ಅಭಿವೃದ್ಧಿಕಾರ್ಯ ಕೈಗೊಳ್ಳಲು ಕುವೆಂಪು ಪ್ರತಿಷ್ಠಾನಕ್ಕೆ ರೂ 5 ಕೋಟಿ, ಉಳ್ಳಾಲದಲ್ಲಿ ರಾಣಿ ಅಬ್ಬಕ್ಕ ಭವನ ನಿರ್ಮಾಣಕ್ಕೆ ರೂ 2 ಕೋಟಿ, ಜಿಗಣಿ ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ ಸಂಸ್ಥಾನದಲ್ಲಿ ಸಾಂಸ್ಕೃತಿಕ ಕೇಂದ್ರ ನಿರ್ಮಾಣಕ್ಕೆ ರೂ. 2 ಕೋಟಿ ಮೀಸಲಿರಿಸಲಾಗಿದೆ. ಜೊತೆಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ರೂ 5 ಕೋಟಿ ಅನುದಾನ, ಕರಾವಳಿ ಪ್ರದೇಶಗಳಲ್ಲಿ ಕಂಬಳ ಉತ್ಸವ ಆಚರಣೆಗೆ ರೂ 1 ಕೋಟಿ ನೆರವು ಹಾಗೂ ದೇವಸ್ಥಾನದ ಶಿಲ್ಪಕಲೆಯ ಬಗ್ಗೆ ಗ್ರಾಮೀಣ ಪ್ರದೇಶಗಳಲ್ಲಿ ಶಿಲ್ಪಿಗಳಿಗೆ ತರಬೇತಿ ನೀಡಲು 3 ಕೋಟಿ ರೂಪಾಯಿ ಅನುದಾನ ಪ್ರಕಟಿಸಲಾಗಿದೆ. ಆದರೆ ಕನ್ನಡ ಭಾಷೆ, ಸಂಸ್ಕೃತಿ ಅಭಿವೃದ್ಧಿಗೆ ಈ ಸಾಂಕೇತಿಕ ಕೊಡುಗೆಗಳಷ್ಟೇ ಸಾಕೆ?

ಕನ್ನಡತನ ಉಳಿಯಲು ಅಗತ್ಯವಾದಂತಹ ಕನ್ನಡ ಶಾಲೆಗಳನ್ನೇ ಮುಚ್ಚಲು ಹೊರಟಿರುವ ಸರ್ಕಾರದಿಂದ ಕನ್ನಡ ಭಾಷೆ, ಸಂಸ್ಕೃತಿಯ ಸಂರಕ್ಷಣೆಗೆ ನೆರವಾಗಬಹುದಾದ ಯೋಜನೆಗಳನ್ನು ನಿರೀಕ್ಷಿಸುವುದಾದರೂ ಹೇಗೆ?

ಜಾಗತೀಕರಣದ ಈ ದಿನಗಳಲ್ಲಿ ಸ್ಥಳೀಯ ಭಾಷೆ, ಸಂಸ್ಕೃತಿಗಳನ್ನೆಲ್ಲಾ ನುಂಗಿ ಆಪೋಶನ ತೆಗೆದುಕೊಳ್ಳುವಂತಹ ಸಾಮ್ರಾಜ್ಯಶಾಹಿಯ ಅಪಾಯದ ಅರಿವು ಯಾವುದೇ ಸಂವೇದನಾಶೀಲ ಆಡಳಿತಕ್ಕೆ ಇರಬೇಕಲ್ಲವೆ? ಶ್ರೀಮಂತ ಭಾಷಾ ಸಂಪತ್ತು, ಸಾಹಿತ್ಯಪರಂಪರೆ ಹಾಗೂ ವಿಶಿಷ್ಟ ಲಿಪಿ ಇರುವ ಕನ್ನಡ ಗಂಡಾಂತರಕ್ಕೆ ಸಿಲುಕಿರುವ ಕಾಲಘಟ್ಟ ಇದು. ಇಂತಹ ಸನ್ನಿವೇಶದಲ್ಲಿ, ಕನ್ನಡ ಭಾಷೆ ಉಳಿದು, ಬೆಳೆಯಬೇಕಾದಲ್ಲಿ ಶಿಕ್ಷಣ, ಆಡಳಿತ ಹಾಗೂ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಕನ್ನಡ ಉಜ್ವಲವಾಗಿ ಬೆಳಗಬೇಕಿದೆ. ವಿಪರ್ಯಾಸ ನೋಡಿ. ಸದ್ಯಕ್ಕೆ ಕನ್ನಡ ಶಾಲೆಗಳನ್ನು ಸರ್ಕಾರವೇ ಮುಚ್ಚುತ್ತಾ ಬರುತ್ತಿದೆ. ಇಂತಹ ಆತಂಕದ ಹೊತ್ತಿನಲ್ಲಿ ಕನ್ನಡ ಪರ ಕಾಳಜಿ ತೋರುವ ಕಾರ್ಯಕ್ರಮಗಳಾವುವೂ ಬಜೆಟ್‌ನಲ್ಲಿ ಗೋಚರಿಸದಿರುವುದು ವಿಷಾದದ ಸಂಗತಿ.

ಆಡಳಿತದಲ್ಲಿ ಕನ್ನಡದ ಅನುಷ್ಠಾನದ ಮಾತಂತೂ ಬರೀ ಮಾತುಗಳಾಗಿಯೇ ವಿಜೃಂಭಿಸುತ್ತಿವೆ. ಇ–ಆಡಳಿತದ ಪರಿಕಲ್ಪನೆ ಬೇರೂರುತ್ತಿರುವ ಇಂದಿನ ದಿನಗಳಲ್ಲಿ ಕಂಪ್ಯೂಟರ್ ಕನ್ನಡದ ಶಿಷ್ಟೀಕರಣವೇ (ಸ್ಟ್ಯಾಂಡರ್ಡೈಜೇಷನ್) ಅಸಾಧ್ಯವಾಗಿರುವುದು ನಾಚಿಕೆಗೇಡು. ಅಂತರ್ಜಾಲ, ಮೊಬೈಲ್ ಫೋನ್‌ಗಳು ಇಂದು ದಿನನಿತ್ಯದ ಅವಶ್ಯಕತೆಗಳು. ಆದರೆ ಇಲ್ಲೆಲ್ಲಾ ಕನ್ನಡ ಬಳಕೆ ಇನ್ನೂ ಅಪೂರ್ಣ. ಹೇಳಿಕೊಳ್ಳಲು ನಮ್ಮ ಬೆಂಗಳೂರು, ಮಾಹಿತಿ ತಂತ್ರಜ್ಞಾನದ ರಾಜಧಾನಿ! ಆದರೆ ಮಾಹಿತಿ ತಂತ್ರಜ್ಞಾನದ ರಾಜಧಾನಿ ಆದ ಕಾರಣ ಮತ್ತೊಂದು ಹೊಡೆತವನ್ನು ಮಾತ್ರ ಅನುಭವಿಸುತ್ತಿದೆ. ಕರ್ನಾಟಕ ಅಥವಾ ಕನ್ನಡ ಸೊಗಡನ್ನೇ ಬೆಂಗಳೂರು ಕಳೆದುಕೊಳ್ಳುತ್ತಿದೆ. ತನ್ನ ರಾಜ್ಯಭಾಷೆಯನ್ನು ತಂತ್ರಜ್ಞಾನದ ಬೆಳವಣಿಗೆಗಳಿಗೆ ತಕ್ಕಂತೆ ರೂಪಿಸಲು ಸಾಧ್ಯವಾಗದ ಕನ್ನಡ ಮನಸ್ಸುಗಳಿಲ್ಲವೆ? ಎಂದು ಪರಿತಪಿಸುವಂತಾಗುತ್ತದೆ. ನಿಜಕ್ಕೂ ಹೇಳಬೇಕೆಂದರೆ, ನಮ್ಮನ್ನಾಳುವವರಿಗೆ, ಈ ದಿಸೆಯಲ್ಲಿ ರಾಜಕೀಯ ಇಚ್ಛಾಶಕ್ತಿ ಇಲ್ಲ. ಏಕೆಂದರೆ, 2008ರಲ್ಲಿ ರಚಿತವಾದ ಚಿದಾನಂದ ಗೌಡ ಅಧ್ಯಕ್ಷತೆಯ ಕನ್ನಡ ಸಾಫ್ಟ್‌ವೇರ್ ಅಭಿವೃದ್ಧಿ ಸಮಿತಿ (ಕೆಎಸ್‌ಡಿಸಿ) ಕನ್ನಡ ತಂತ್ರಾಂಶ ಅಭಿವೃದ್ಧಿಗೆ ಸಂಬಂಧಿಸಿದಂತೆ ಹಲವಾರು ಶಿಫಾರಸುಗಳ ಜೊತೆಗೆ ಸಲಹೆಗಳನ್ನೂ ಸರ್ಕಾರಕ್ಕೆ ಸಲ್ಲಿಸಿದೆ. ಆದರೆ ಈವರೆಗೂ ಸರ್ಕಾರ ಶಿಫಾರಸುಗಳನ್ನು ಪರಿಗಣಿಸುವ ಗೋಜಿಗೇ ಹೋಗಿಲ್ಲ. ಭಾಷೆಯ ಅಭಿವೃದ್ಧಿಗೆ ತಂತ್ರಜ್ಞಾನ ಒಂದು ಸಾಧನ ಎಂಬುದನ್ನು ಸರ್ಕಾರ ಮರೆತಂತಿದೆ. ಬಹುಸಾಧನಗಳು ಹಾಗೂ ಬಹುಮಾಧ್ಯಮಗಳಲ್ಲಿ ಕನ್ನಡ ಬಳಕೆಗೆ ತಂತ್ರಜ್ಞಾನದ ಅಭಿವೃದ್ಧಿ ಎಷ್ಟೊಂದು ಅಗತ್ಯ ಎಂಬುದನ್ನು ಸರ್ಕಾರಕ್ಕೆ ಮನಗಾಣಿಸುವವರಾರು?




ಕನ್ನಡತನ ಉಳಿಯಲು ಅಗತ್ಯವಾದಂತಹ ಕನ್ನಡ ಶಾಲೆಗಳನ್ನೇ ಮುಚ್ಚಲು ಹೊರಟಿರುವ ಸರ್ಕಾರದಿಂದ ಕನ್ನಡ ಭಾಷೆ, ಸಂಸ್ಕೃತಿಯ ಸಂರಕ್ಷಣೆಗೆ ನೆರವಾಗಬಹುದಾದ ಯೋಜನೆಗಳನ್ನು ನಿರೀಕ್ಷಿಸುವುದಾದರೂ ಹೇಗೆ? ವರ್ಷಕ್ಕೊಮ್ಮೆ ಸರ್ಕಾರಿ ಕಚೇರಿ ಹಾಗೂ ಶಾಲೆ, ಕಾಲೇಜುಗಳಲ್ಲಿ ನವೆಂಬರ್ 1ರಂದು ಕನ್ನಡ ಧ್ವಜಗಳನ್ನು ಹಾರಿಸಿಬಿಟ್ಟರೆ ಕನ್ನಡ ಉಳಿಯುತ್ತದೆಯೆ? ಭಾಷೆ ಬೆಳೆಯಬೇಕಿರುವುದು ಮನಸ್ಸುಗಳಲ್ಲಿ ಹಾಗೂ ದಿನನಿತ್ಯದ ಆಗುಹೋಗುಗಳಲ್ಲಿ.

■ ಸಿ.ಜಿ.ಮಂಜುಳಾ